ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ನಾವು Adjournment Motion move ಮಾಡಿದ್ದೇವೆ ರಾಜ್ಯದಲ್ಲಿ ಭೀಕರವಾದ ಬರಗಾಲವಿದೆ, ಅತಿವೃಷ್ಟಿಯಿದೆ, ಅದನ್ನು ಮೊದಲು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ

ಅಧ್ಯಕ್ಷರು ಅದನ್ನು ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳೋಣ

ಶ್ರೀ ಆರ್ ವಿ ದೇಶಪಾಂಡೆ ಎಲ್ಲ ಕಲಾಪಗಳನ್ನು ಬಿಟ್ಟು Adjournment Motion ತೆಗೆದುಕೊಳ್ಳಬೇಕಾಗುತ್ತದೆ

ಅಧ್ಯಕ್ಷರು ಪ್ರಶ್ನೋತ್ತರವಾದ ಮೇಲೆ ಶೂನ್ಯವೇಳೆಯಲ್ಲಿ ತಾವು ಆ ವಿಷಯವನ್ನು ಪ್ರಸ್ತಾಪ ಮಾಡಿ, ನಾನು ನಿಮಗೆ ಆಗ ಅವಕಾಶ ಕೊಡುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಸಾಮಾನ್ಯವಾಗಿ ಏನು ಕಲಾಪವಿರುತ್ತದೆ, ಅದನ್ನು ಬಾಕಿ ಇಟ್ಟು Adjournment Motion ತೆಗೆದುಕೊಳ್ಳಲಾಗುತ್ತದೆ ಅದಕ್ಕೆ ಸರ್ಕಾರವೂ ಒಪ್ಪಿಕೊಳ್ಳಬಹುದು ರಾಜ್ಯದಲ್ಲಿ ಬಹಳ ಭೀಕರವಾದ ಬರಗಾಲವಿದೆ ರೈತರು ಕಷ್ಟದಲ್ಲಿದ್ದಾರೆ, ದನಕರುಗಳು ಕಷ್ಟದಲ್ಲಿವೆ

ಅಧ್ಯಕ್ಷರು ಅವುಗಳನ್ನೆಲ್ಲ consider ಮಾಡತಕ್ಕಂಥ ಪರಿಪಾಠ ಆಯಿತು, ನಂತರ ಅದಕ್ಕೆ ಅವಕಾಶ ಕೊಡುತ್ತೇನೆ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ

3 ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೊರಾರ್ಜಿ ವಸತಿ ಶಾಲೆಯನ್ನು ಪ್ರಾರಂಭಿಸುವುದು

31 (212) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸೊರಬ ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಮಂಜೂರಾದ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆಯೇ ,

ಆ) ಮೊರಾರ್ಜಿ ವಸತಿ ಶಾಲೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ,

ಇ) ವಿಳಂಬಕ್ಕೆ ಕಾರಣವೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಸೊರಬ ತಾಲ್ಲೂಕಿನ ಹಿರೇಮಾಗಡಿ ಗ್ರಾಮದ ಸರ್ವೆ ನಂ 7ರಲ್ಲಿ ಒಟ್ಟು 24 ಎಕರೆ 37 ಗುಂಟೆ ಜಮೀನನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಗಾಗಿ ಕಾಯ್ದಿರಿಸಲಾಗಿದೆ ಆದರೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಾಯ್ದಿರಿಸಿದ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ತೆಗೆದುಕೊಂಡಿರುವುದಿಲ್ಲ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸೊರಬ ತಾಲ್ಲೂಕಿಗೆ ಮಂಜೂರಾಗಿರುವುದಿಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಎಸ್ ಕುಮಾರ್ ಬಂಗಾರಪ್ಪ ಮಾನ್ಯ ಅಧ್ಯಕ್ಷರೇ, ವಸತಿ ಶಾಲೆಗಾಗಿ ಈಗಾಗಲೇ ಜಾಗವನ್ನು ಕಾಯ್ದಿರಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ 2ವರ್ಷಗಳ ಹಿಂದೆಯೇ ಸುಮಾರು 24 ಎಕರೆಗಳಷ್ಟು ಜಾಗವನ್ನು ಅದಕ್ಕೆಂದೇ ಕಾಯ್ದಿರಿಸಲಾಗಿದೆ ಸೊರಬ ತಾಲ್ಲೂಕಿಗೆ ವಸತಿ ಶಾಲೆಯನ್ನು ಕೊಡಬೇಕೆಂದು ಇತ್ತೀಚೆಗೆ ನಾವು ಚರ್ಚೆ ಮಾಡಿದಾಗ, ಮಾನ್ಯ ಸಚಿವರು ಇದನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದರೂ ಕೂಡ ಇನ್ನೂ ಮಂಜೂರು ಮಾಡಿರುವುದಿಲ್ಲ ಜಾಗಗಳು ಇಲ್ಲದೇ ಇರತಕ್ಕಂಥ ಕಡೆಗಳಲ್ಲಿ ವಸತಿ ಶಾಲೆಗಳನ್ನು ಕೊಡುತ್ತಾರೆ ನಂಜುಂಡಪ್ಪನವರ ವರದಿ ಪ್ರಕಾರವಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ ನಂಜುಂಡಪ್ಪನವರ ವರದಿ ಪ್ರಕಾರವಾಗಿಯೂ ಕೊಡುವುದಿಲ್ಲ ಯಾವುದಾದರೂ ಒಂದು ಮಾನದಂಡ ವನ್ನಿಟ್ಟುಕೊಂಡು ವಸತಿ ಶಾಲೆಗಳನ್ನು ಮಾಡಬೇಕಾಗುತ್ತದೆ ಇಲ್ಲದಿದ್ದರೆ, ಅಲ್ಲಿ ನಾವು ಜಾಗ ಕಾಯ್ದಿರಿಸಿದರೂ ಪ್ರಯೋಜನವಾಗುವುದಿಲ್ಲ, ನಂಜುಂಡಪ್ಪ ವರದಿ ಪ್ರಕಾರವೂ ಆಗುವುದಿಲ್ಲ, ಜನಸಂಖ್ಯೆಯ ಆಧಾರದ ಮೇಲೆಯೂ ಆಗುವುದಿಲ್ಲವೆಂದರೆ ಹೇಗೆ? ನಮ್ಮ ತಾಲ್ಲೂಕಿನಲ್ಲಿ ಮುಂದೆ ವಸತಿ ಶಾಲೆಯನ್ನು ಮಾಡುತ್ತೇವೆ ಎಂದೂ ಹೇಳಿಲ್ಲ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಉತ್ತರವನ್ನು ಕೊಡುತ್ತಾರೆ ಇದು ತುಂಬಾ ನಿರಾಶಾದಾಯಕವಾದ ಉತ್ತರ ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುತ್ತೇನೆ

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದುದು ನಿಜವಿದೆ ಬರುವ ವರ್ಷದಲ್ಲಿ ಅದನ್ನು ಪ್ರಾರಂಭ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಕೆ ಗೋಪಾಲ ಪೂಜಾರಿ ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ನನ್ನ ಕ್ಷೇತ್ರದಲ್ಲಿ ವಸತಿ ಶಾಲೆಯನ್ನು ಪ್ರಾರಂಭ ಮಾಡಲು ಅನುಮತಿ ನೀಡಿತ್ತು ಅದಕ್ಕೆ ಬೇಕಾದ ಜಾಗವನ್ನೂ ಸಹ ನಾವು ಕಾಯ್ದಿರಿಸಿದ್ದೇವೆ ಆ ಖಾಸಗಿ ಜಾಗಕ್ಕೆ ಬಾಡಿಗೆಯನ್ನು ಕೊಡಲೂ ಪ್ರಾರಂಭ ಮಾಡಿದ್ದೇವೆ ಆದರೂ ಅದನ್ನು ಪ್ರಾರಂಭ ಮಾಡಲು ಸರ್ಕಾರ ಇಲ್ಲಿಯವರೆಗೂ ಯಾವ ರೀತಿಯಲ್ಲೂ ಮುಂದೆ ಬರಲಿಲ್ಲ ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಬಿ ಎಸ್ ಹೊರಟ್ಟಿ ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಮಾಹಿತಿ ಪಡೆದು ನಂತರ ಉತ್ತರವನ್ನು ಹೇಳಲಾಗುವುದು

ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಪೂರೈಸುವುದು

32 (218) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಹುಚ್ಚುನಾಯಿ ಕಡಿತಕ್ಕೆ ಚುಚ್ಚುಮದ್ದನ್ನು ಖರೀದಿಸಲು ವಾರ್ಷಿಕ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು , (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಆರ್ ಅಶೋಕ್ (ಆರೋಗ್ಯ ಸಚಿವರು)

ಅ) ಹುಚ್ಚುನಾಯಿ ಕಡಿತದ ಚುಚ್ಚುಮದ್ದನ್ನು ಖರೀದಿಸಲು ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ 2006–07ನೇ ಸಾಲಿನಲ್ಲಿ ಸರ್ಕಾರಿ ಔಷಧ ಮಳಿಗೆಗೆ ಒಟ್ಟು ರೂ 58 00 ಕೋಟಿ ಅನುದಾನ ಮತ್ತು ವೈದ್ಯಕೀಯ ಶಿಕ್ಷಣ ಅಡಿಯಲ್ಲಿ 18 56 ಕೋಟಿ ರೂ ಬಿಡುಗಡೆಯಾಗಿದೆ ಈ ಅನುದಾನದಿಂದ ರಾಜ್ಯದ ವಿವಿಧ ಆಸ್ಪತ್ರೆಗಳಿಂದ ಬಂದಂತ ಬೇಡಿಕೆಗೆ ಅನುಗುಣವಾಗಿ ರೂ 3,39,75,076/–ಗಳ ಹುಚ್ಚುನಾಯಿ ಕಡಿತದ (ರ್‍ಯಾಬಿಪೂರ್) ಔಷಧಿಯನ್ನು ಖರೀದಿಸಿ ವಿತರಿಸಲಾಗಿದೆ

(ಜಿಲ್ಲಾವಾರು ಸರಬರಾಜು ಮಾಡಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ)